# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ – ಅಂತಿಮ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/657/ಗ್ರಾಪಂಕಾ/2016, ದಿನಾಂಕ:15–11–2016 ಹಾಗೂ ತಿದ್ದುಪಡಿ ಆದೇಶ ದಿನಾಂಕ:25–11–2016.
2. ಅಪರ ನಿಬಂಧಕರು ವಿಚಾರಣೆಗಳು–8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:UPLOK-2/DE/673/2016/ARE-8, ದಿನಾಂಕ:14-12-2017.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ; UPLOK-2/DE/673/2016/ARE-8, ದಿನಾಂಕ:15-12-2017.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ;UPLOK-2/DE/673/2016/ARE-8, ದಿನಾಂಕ:16-12-2017.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/657/ಗ್ರಾಪಂಕಾ/2016, ದಿನಾಂಕ:03–01–2018.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ರಡಿಯಲ್ಲಿ ಹಾಗೂ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 214(2)(ಬಿ)(i) ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಆದರಂತೆ ಅಪರ ನಿಬಂಧಕರು ವಿಚಾರಣೆಗಳು–8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

> "The charge leveled against the DGO was that, while he was working as the Secretary of Bagur Gram Panchayath of Hosadurga Taluk of Chitradurga District, one Shri Keshavappa (complainant) had filed an application in 2011 for taking action under Section 72 of Karnataka Panchayath Raj Act. However, the DGO kept his application pending from 2011 to 2016. Thereby, the DGO has failed to maintain absolute integrity and devotion to duty and rendered himself as unbecoming of a Government Servant and committed misconduct within the meaning of Rule 3(1)(i) to (iii) of KCS (Conduct) Rules, 1966."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ

2...

ಅನುಗುಣವಾಗಿ ಸದರಿಯವರಿಗೆ ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ ಇವರಿಗೆ ಲಭ್ಯವಾಗಬೇಕಾಗಿದ್ದ **"denial of 05% of the pensionary benefit for a period of five years without cumulative effect"** ಎಂಬ ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಆದರೆ ಸದರಿಯವರು ಸರ್ಕಾರಕ್ಕೆ ಯಾವುದೇ ಲಿಖಿತ ವಿವರಣೆಯನ್ನು ಸಲ್ಲಿಸಿರುವುದಿಲ್ಲ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯ ಕಂಡಿಕೆಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

It is the burden of the Disciplinary Authority to prove the charge on the principles of preponderance of probabilities.

The Presenting Officer representing the Disciplinary Authority relies on the oral evidence of PW1 and the documents which marked as Ex.P 1 to P 13.

Ex.P-1 to 3 and P-9 to 11 are the complaints and Form No.1 and 2 filed by the complainant. The Complaint is regarding the construction of stone slab compound and obstruction of the way by the neighboring owner namely G.Thippeshappa. Complainant has been examined as PW-1 He has stated about these facts in his Chief Examination. Evidence of PW-1 is Un-Challenged. DGO who had appeared on service of Articles of Charge, pleaded not guilty to the First Oral statement, but subsequently, he failed to appear. He has not filed his written Statement and has been pleaded exparte. Ex.P-12 is the comments submitted by the DGO during scrutiny stage. He has stated that on 29-06-2011 he had issued notice to the said Thippeshappa but has not received any reply from the said Thippeshappa. This shows that the complainant had given the representation even prior to 29-06-2011 regarding the obstruction caused by his neighbor Thippeshappa and that the said Thippeshappa has not given any reply inspite of lapse of more than 5 years. Further, the DGO has stated in his comments that the matter would be placed before the general body meeting of the Panchayath during May 2016, since it is necessary to seek approval of the general body as required under section 72 of the Karnataka Panchayath Raj Act 1993. But, there is nothing to show whether he has placed the matter before the general body or whether any action has been taken. Ex.P-13 is the rejoinder filed by the Complainant. In Ex.P13 the Complainant has stated that the DGO has not taken any action. Ex.P-4 to 8 are the Photographs of the said place.

The evidence of PW-1 and the documents Ex.P-1 to 13 are sufficient to establish the charge. Hence, Point no.1 is answered in the Affirmative.

ಸರ್ಕಾರವು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀರ್ವತೆಗೆ ಅನುಗುಣವಾಗಿ ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ

ಜಿಲ್ಲೆ ರವರಿಗೆ ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ ಇವರಿಗೆ ಲಭ್ಯವಾಗಬೇಕಾಗಿದ್ದ **"denial of 05% of the pensionary benefits for a period of five years without cumulative effect"** ಎಂಬ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತವೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರಿಗೆ **"denial of 05% of the pensionary benefit for a period of five years without cumulative effect"** ಎಂಬ ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/657/ಗ್ರಾಪಂಕಾ/2016, ಬೆಂಗಳೂರು, ದಿನಾಂಕ:26-10-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ ಇವರಿಗೆ ಲಭ್ಯವಾಗಬೇಕಾಗಿದ್ದ **"denial of 05% of the pensionary benefits for a period of five years without cumulative effects"** ಎಂಬ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

26/X

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.
7. ಶ್ರೀ ಪುಟ್ಟರಂಗಪ್ಪ, ಹಿಂದಿನ ಕಾರ್ಯದರ್ಶಿ, ಬಾಗೂರು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.